# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 627
2. ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಯು.ಬಿ. ವೆಂಕಟೇಶ್, (ನಾಮನಿರ್ದೇಶಿತರು)
3. ಉತ್ತರಿಸುವ ದಿನಾಂಕ : 14-12-2020
4. ಉತ್ತರಿಸುವ ಸಚಿವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರಿನ ಸಮೀಪದಲ್ಲಿರುವ ಟೋಯೋಟಾ ಕಿರ್ಲೋಸ್ಕರ್ ಮೋಟಾರ್‌ನ ಆಂತರಿಕ ಕಲಹಗಳಿಗೆ ಕಾರಣವೇನು? | ಬೆಂಗಳೂರಿನ ಸಮೀಪದಲ್ಲಿರುವ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ಸ್‌ನ ಕಾರ್ಮಿಕ ಸಂಘದ ಪದಾಧಿಕಾರಿಯನ್ನು ಶಿಸ್ತು ಕ್ರಮ ಕಾಯ್ದಿರಿಸಿ ಅಮಾನತ್ತುಗೊಳಿಸಿದ ವಿಷಯವನ್ನು ಮುಂದಿಟ್ಟುಕೊಂಡು ದಿನಾಂಕ:09.11.2020 ರಂದು ಕಾರ್ಖಾನೆಯ ಆವರಣದಲ್ಲಿ ಹಠಾತ್ ಮುಷ್ಕರ ಹೂಡಿರುವುದು ಮತ್ತು ಕಾರ್ಮಿಕರು ಹೂಡಿದ ಮುಷ್ಕರಕ್ಕೆ ಪ್ರತಿಯಾಗಿ ಆಡಳಿತವರ್ಗದವರು ದಿನಾಂಕ:10-11-2020 ರಿಂದ ಸಂಸ್ಥೆಗೆ ಲಾಕ್‌ಔಟ್ ಘೋಷಣೆ ಮಾಡಿರುವುದು ಟೊಯೋಟಾ ಕಿರ್ಲೋಸ್ಕರ್ ಮೋಟಾರ್ಸ್‌ನ ಆಂತರಿಕ ಕಲಹಗಳಿಗೆ ಕಾರಣವಾಗಿರುತ್ತದೆ. |
| ಆ | ಆಂತರಿಕ ಕಲಹಗಳಿಂದ ಕಾರ್ಮಿಕರು ಬೀದಿ ಪಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಹೌದು. |
| ಇ | ನೌಕರರು ತಮ್ಮ ಬೇಡಿಕೆಗಳಿಗೆ ಒತ್ತಾಯಿಸಿ ಅನಿರ್ದಿಷ್ಟಾವಧಿಯವರೆಗೆ ಮುಷ್ಕರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಇದರ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು? | ಹೌದು<br><br>ಕಾರ್ಮಿಕರ ಬೇಡಿಕೆಗಳ ಬಗ್ಗೆ ಮತ್ತು ಅವರು ಹೂಡಿರುವ ಮುಷ್ಕರ ಹಾಗು ಆಡಳಿತವರ್ಗದವರು ಘೋಷಿಸಿರುವ ಲಾಕ್ ಔಟ್ ವಿಷಯವನ್ನು ಕೈಗಾರಿಕಾ ವಿವಾದ ಕಾಯಿದೆ 1947 ರಡಿಯಲ್ಲಿ ಸಂಧಾನಕ್ಕೆ ಒಳಪಡಿಸಿ ಉಭಯಪಕ್ಷಗಳ ಮಧ್ಯೆ ಒಪ್ಪಂದ ಏರ್ಪಡಿಸಲು ಕಾರ್ಮಿಕ ಇಲಾಖೆ ಪ್ರಯತ್ನಿಸಿದೆ. ಈ ಕೈಗಾರಿಕಾ ವಿವಾದದಲ್ಲಿ ಉಭಯಪಕ್ಷಗಳು ಯಾವುದೇ ಒಮ್ಮತಕ್ಕೆ ಬಾರದ ಕಾರಣ ಸಂಧಾನ ವಿಫಲವಾಗಿದೆ ಎಂದು ಪರಿಗಣಿಸಿ ಸರ್ಕಾರದ ಆದೇಶ ಸಂಖ್ಯೆ: ಕಾಇ 411 ಐಡಿಎಂ 2020 ದಿನಾಂಕ:19-11-2020 ರಲ್ಲಿ ಕೈಗಾರಿಕಾ ವಿವಾದ ಕಾಯ್ದೆ, 1947ರ ಕಲಂ 12(4) ರನ್ವಯ ಕಾರ್ಮಿಕ ನ್ಯಾಯಾಲಯಕ್ಕೆ ನ್ಯಾಯ ನಿರ್ಣಯಕ್ಕಾಗಿ ಶಿಫಾರಸ್ಸು ಮಾಡಲಾಗಿರುತ್ತದೆ.<br><br>ಅಲ್ಲದೆ, ಕೈಗಾರಿಕಾ ವಿವಾದ ಕಾಯ್ದೆ 1947ರ ಕಲಂ 10(3) ರಡಿಯಲ್ಲಿ ಕಾರ್ಮಿಕರು ಹೂಡಿದ ಮುಷ್ಕರ ಹಾಗೂ ಆಡಳಿತವರ್ಗ ಘೋಷಿಸಿದ ಲಾಕ್ ಔಟ್ ಅನ್ನು ನಿಷೇಧಿಸಿ ಸರ್ಕಾರದ ಆದೇಶ ಸಂಖ್ಯೆ: ಕಾಇ 411 ಐಡಿಎಂ 2020 ದಿನಾಂಕ:18-11-2020 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ. |

| | | |
|---|---|---|
| | | ಸರ್ಕಾರವು ಮುಷ್ಕರ ಹಾಗೂ ಲಾಕ್ ಔಟ್ ಅನ್ನು ನಿಷೇಧಿಸಿದ ನಂತರ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ಸ್ ಸಂಸ್ಥೆಯು ದಿನಾಂಕ:19-11-2020 ರಿಂದ ಲಾಕ್ ಔಟ್ ತೆರವುಗೊಳಿಸಿದ್ದು, ಕಾರ್ಮಿಕರು ಮುಷ್ಕರವನ್ನು ಹಿಂಪಡೆದಿರುವುದಿಲ್ಲ.<br><br>ಕಾರ್ಮಿಕರು ಮುಷ್ಕರ ಮುಂದುವರೆಸಿದ ಕಾರಣ ನಿಗದಿತ ಕಾರ್ಮಿಕರು ಕೆಲಸಕ್ಕೆ ಹಾಜರಾಗದೇ ಇದ್ದುದರಿಂದ ದಿನಾಂಕ:23-11-2020 ರಿಂದ ಆಡಳಿವರ್ಗದವರು ಪುನಃ ಲಾಕ್ ಔಟ್ ಘೋಷಣೆ ಮಾಡಿ, ಕೆಲಸಕ್ಕೆ ಹಾಜರಾಗ ಬಯಸುವ ಕಾರ್ಮಿಕರು ಒಂದು ಒಪ್ಪಿಗೆ ಪತ್ರ ಬರೆದುಕೊಟ್ಟು ಕೆಲಸಕ್ಕೆ ಹಾಜರಾಗಬಹುದೆಂದು ತಿಳಿಸಿರುತ್ತಾರೆ. ಅದರಂತೆ ಇಂದಿನವರೆಗೂ ಅನೇಕ ಕಾರ್ಮಿಕರು ಕರ್ತವ್ಯಕ್ಕೆ ಹಾಜರಾಗಿದ್ದು ಕೇವಲ ಒಂದು ಪಾಳಿಯಲ್ಲಿ ಮಾತ್ರ ಉತ್ಪಾದನೆ ನಡೆಯುತ್ತಿರುತ್ತದೆ.<br><br>ಮುಷ್ಕರ ಹಾಗೂ ಲಾಕ್ಔಟ್ ಅನ್ನು ತೆರವುಗೊಳಿಸಲು ಸರ್ಕಾರ ಸಂಧಾನ ಹಾಗೂ ಕಾನೂನಾತ್ಮಕ ಕ್ರಮಗಳ ಮೂಲಕ ಕೈಗಾರಿಕಾ ಶಾಂತಿ ಕಾಪಾಡಲು ಪ್ರಯತ್ನಿಸುತ್ತಿದೆ. |

ಸಂಖ್ಯೆ: ಕಾಇ 439 ಐಡಿಎಂ 2020

(ಅರಬೈಲ್ ಶಿವರಾಮ್ ಹೆಬ್ಬಾರ್)
ಕಾರ್ಮಿಕ & ಸಕ್ಕರೆ ಸಚಿವರು.

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ.ಯು.ಬಿ ವೆಂಕಟೇಶ್ (ನಾಮ ನಿರ್ದೇಶಿತರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 77(627) ಕ್ಕೆ ಪೂರಕ ಟಿಪ್ಪಣಿ

- ದಿನಾಂಕ:09.11.2020ರಂದು ಟೊಯೋಟಾ ಕಿರ್ಲೋಸ್ಕರ್ ಮೋಟಾರ್ಸ್ ಎಂಪ್ಲಾಯೀಸ್ ಯೂನಿಯನ್‌ನ ಸದಸ್ಯರುಗಳು ಕಾರ್ಖಾನೆಯ ಆವರಣದೊಳಗೆ ಕಾರ್ಮಿಕ ಸಂಘಟನೆಯ ಪದಾಧಿಕಾರಿಯನ್ನು ಅಮಾನತ್ತುಗೊಳಿಸಿದ ಕಾರಣ ದಿಢೀರ್ ಮುಷ್ಕರ ಹೂಡಿರುತ್ತಾರೆ.
- ದಿನಾಂಕ:10.11.2020ರಂದು ಸದರಿ ಮುಷ್ಕರಕ್ಕೆ ಪ್ರತಿಯಾಗಿ ಆಡಳಿತವರ್ಗ ಕಾರ್ಖಾನೆಗೆ ಲಾಕ್‌ಔಟ್ ಘೋಷಣೆ ಮಾಡಿರುತ್ತಾರೆ.
- ಕಾರ್ಮಿಕ ಇಲಾಖೆಯ ಸಂಧಾನಾಧಿಕಾರಿಗಳು ಹಾಗೂ ಅಪರ ಕಾರ್ಮಿಕ ಆಯುಕ್ತರು (ಕೈಗಾರಿಕಾ ಬಾಂಧವ್ಯ) ಕಾರ್ಮಿಕರ ಬೇಡಿಕೆಗಳ ಕುರಿತಾಗಿ ಸಂಧಾನ ನಡೆಸಿ ಕಾರ್ಮಿಕರ ಬೇಡಿಕೆಗಳನ್ನು ನ್ಯಾಯಾಧೀಕರಣಕ್ಕೆ ಸಲ್ಲಿಸಿ, ಸರ್ಕಾರಕ್ಕೆ ಕಾರ್ಮಿಕ ಸಂಘಟನೆ ನಡೆಸುತ್ತಿರುವ ಮುಷ್ಕರ ಹಾಗೂ ಆಡಳಿತವರ್ಗ ಘೋಷಿಸಿರುವ ಲಾಕ್‌ಔಟ್ ನಿಷೇಧಗೊಳಿಸಬೇಕೆಂದು ದಿ:18.11.2020ರಂದು ವರದಿ ಸಲ್ಲಿಸಿರುತ್ತಾರೆ.
- ಅದರಂತೆ, ಸರ್ಕಾರದ ಆದೇಶ ದಿ:18.11.2020ರಲ್ಲಿ ಮುಷ್ಕರ ಹಾಗೂ ಲಾಕ್‌ಔಟ್ ಎರಡನ್ನು ಕೈಗಾರಿಕಾ ವಿವಾದ ಕಾಯ್ದೆ ಕಲಂ 10(3)ರ ಪ್ರಕಾರ ನಿಷೇಧಿಸಿರುತ್ತದೆ.
- ಆಡಳಿತವರ್ಗ ಸರ್ಕಾರದ ಆದೇಶದಂತೆ ದಿ:18.11.2020ರಂದು ಸಂಸ್ಥೆಯ ಆವರಣದಲ್ಲಿ ನೋಟೀಸ್ ಪ್ರದರ್ಶಿಸಿ, ದಿ:19.11.2020ರಿಂದ ಲಾಕ್‌ಔಟ್ ತೆರವುಗೊಳಿಸಿ, ಕಾರ್ಮಿಕರು ನಿಗದಿತ ಪಾಳಿಯಂತೆ ಕೆಲಸಕ್ಕೆ ಹಾಜರಾಗುವಂತೆ ತಿಳಿಸಿರುತ್ತಾರೆ.
- ಆದರೆ, ಕಾರ್ಮಿಕ ಸಂಘಟನೆಯು ಸರ್ಕಾರದ ಆದೇಶವನ್ನು ಪಾಲಿಸದೇ ಮುಷ್ಕರವನ್ನು ಇಲ್ಲಿಯವರೆಗೂ ಮುಂದುವರೆಸಿರುತ್ತಾರೆ. ಆದ್ದರಿಂದ, ಕಾರ್ಖಾನೆಯಲ್ಲಿ ಕಾರ್ಮಿಕರ ಹಾಜರಾತಿ ಕಡಿಮೆಯಿದ್ದ ಕಾರಣವನ್ನು ತಿಳಿಸಿ ಮತ್ತು ಕಾರ್ಖಾನೆಯ ಆವರಣದೊಳಗೆ ಕೈಗಾರಿಕಾ ಅಶಾಂತಿ ಆಗಬಹುದೆಂಬ ಸಂಶಯದೊಂದಿಗೆ ಆಡಳಿತವರ್ಗ ಪುನಃ ದಿ:23.11.2020ರಂದು ಲಾಕ್‌ಔಟ್ ಘೋಷಿಸಿರುತ್ತಾರೆ.
- ಎರಡನೇ ಬಾರಿ ಘೋಷಿಸಲಾದ ಲಾಕ್‌ಔಟ್ ನೋಟೀಸ್‌ನಲ್ಲಿ ಆಡಳಿತವರ್ಗದವರು ಷರತ್ತು ಬದ್ಧ ಒಪ್ಪಿಗೆ ಪತ್ರ ಸಲ್ಲಿಸುವ ಕಾರ್ಮಿಕರು ಕೆಲಸಕ್ಕೆ ಹಾಜರಾಗಬಹುದು ಎಂದು ಸೂಚಿಸಿರುತ್ತಾರೆ.
- ಅದರಂತೆ, ಇಂದಿನವರೆಗೂ ಅನೇಕ ಕಾರ್ಮಿಕರು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ ಹಾಗೂ ಒಂದು ಪಾಳಿಯಲ್ಲಿ ಉತ್ಪಾದನೆ ನಡೆಯುತ್ತಿರುತ್ತದೆ.
- ಈ ಮಧ್ಯೆ, ಆಡಳಿತವರ್ಗವು, ಸಂಘದ ಪದಾಧಿಕಾರಿಗಳು ಕರ್ತವ್ಯ ಲೋಪ ಹಾಗೂ ಸಂಸ್ಥೆಯ ವಿರುದ್ಧವಾಗಿ ಅಶಿಸ್ತಿನಿಂದ ವರ್ತಿಸಿರುವ ಕಾರ್ಮಿಕರನ್ನು ಅಮಾನತ್ತುಗೊಳಿಸಿ, ಇಲಾಖಾ ವಿಚಾರಣೆಯನ್ನು ಬಾಕಿಯಿರಿಸಿರುತ್ತಾರೆ.
- ಮುಷ್ಕರವನ್ನು ಮತ್ತು ಲಾಕ್‌ಔಟ್‌ನ್ನು ಸರ್ಕಾರ ನಿಷೇಧಿಸಿದ್ದರೂ ಸಹ ಕಾರ್ಮಿಕ ಸಂಘಟನೆ ಮತ್ತು ಆಡಳಿತವರ್ಗ ಮುಷ್ಕರವನ್ನು ಮತ್ತು ಲಾಕ್‌ಔಟ್‌ನ್ನು ಮುಂದುವರೆಸುತ್ತಿರುವುದು ಕೈಗಾರಿಕಾ ವಿವಾದ ಕಾಯ್ದೆಯ ಕಲಂ 24(1) (ii) ರ ಅಡಿಯಲ್ಲಿ ಕಾನೂನು ಬಾಹಿರ ಮುಷ್ಕರ ಮತ್ತು ಲಾಕ್‌ಔಟ್ ಆಗುತ್ತದೆ.
- ಕಾನೂನು ಬಾಹಿರ ಮುಷ್ಕರ ಮತ್ತು ಲಾಕ್‌ಔಟ್ ಕೈಗಾರಿಕಾ ವಿವಾದ ಕಾಯ್ದೆಯ ಕಲಂ 26 (1) ಮತ್ತು (2) ರ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿರುತ್ತದೆ.
- ಅದರಂತೆ, ಆಡಳಿತವರ್ಗ ಮತ್ತು ಕಾರ್ಮಿಕ ಸಂಘಟನೆ ಇಬ್ಬರೂ ಕೈಗಾರಿಕಾ ವಿವಾದ ಕಾಯ್ದೆಯ ಪ್ರಾವಧಾನಗಳನ್ನು ಉಲ್ಲಂಘಿಸಿರುವ ಕಾರಣ ಅವರ ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ದಿನಾಂಕ:09.12.2020ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಸಮ್ಮುಖದಲ್ಲಿ ವಿಚಾರಣೆಯನ್ನು ನಿಗದಿಪಡಿಸಿದೆ.